1426 (1818) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) – ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ 2005–06ನೇ ಸಾಲಿನಲ್ಲಿ ಮಂಜೂರಾದ ಸೇತುವೆಗಳೆಷ್ಟು,

ಆ) ಯಾವ ಯಾವ ಯೋಜನೆಗಳಲ್ಲಿ ಸೇತುವೆಗಳನ್ನು ಮಂಜೂರು ಮಾಡಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು),

ಇ) ರಾಜ್ಯದಲ್ಲಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾದ ರಸ್ತೆಗಳೆಷ್ಟು,

ಈ) ಅದರಲ್ಲಿ ಧಾರವಾಡ ಜಿಲ್ಲೆಗಳಲ್ಲಿ ಮಂಜೂರಾದ ರಸ್ತೆಗಳು ಯಾವ ಹಂತದಲ್ಲಿವೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಧಾರವಾಡ ಜಿಲ್ಲೆಯಲ್ಲಿ 8 ಸೇತುವೆಗಳು ವಿವಿಧ ಯೋಜನೆ ಅಡಿ ಮಂಜೂರಾಗಿವೆ

ಆ) ವಿವಿಧ ಯೋಜನೆಗಳಲ್ಲಿ ಈ ಕೆಳಕಂಡ ಸೇತುವೆಗಳನ್ನು ಮಂಜೂರು ಮಾಡಲಾಗಿದೆ

ಕ್ರಸಂ	ತಾಲ್ಲೂಕು	ಸೇತುವೆ ವಿವರ
	ನಬಾರ್ಡ್ ಯೋಜನೆ	
1	ಹುಬ್ಬಳ್ಳಿ	ವೀರಾಪುರ–ಮಂಟೂರು ರಸ್ತೆಯ ಕಿ ಮೀ 8 50ರಲ್ಲಿ ಸೇತುವೆ ನಿರ್ಮಾಣ
	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	
2	ಹುಬ್ಬಳ್ಳಿ	ಸೂಪಾ–ಅಣ್ಣಿಗೇರಿ ರಸ್ತೆಯ ಕಿ ಮೀ 87 10 ರಲ್ಲಿ ಸೇತುವೆ ನಿರ್ಮಾಣ
3	ಹುಬ್ಬಳ್ಳಿ	ಸೂಪಾ–ಅಣ್ಣಿಗೇರಿ ರಸ್ತೆಯ ಕಿ ಮೀ 89 80 ರಲ್ಲಿ ಸೇತುವೆ ನಿರ್ಮಾಣ

4	ಹುಬ್ಬಳ್ಳಿ	ಜಿನಾಪುರ–ಮಂಟೂರು ರಸ್ತೆಯ ಕಿ ಮೀ 6 5 ರಲ್ಲಿ ಸೇತುವೆ ನಿರ್ಮಾಣ
5	ಧಾರವಾಡ	ತೇಗೂರು–ಮಂಡಿಹಳ್ಳಿ ರಸ್ತೆ ಕಿ ಮೀ 12 40 ರಲ್ಲಿ ಸೇತುವೆ ನಿರ್ಮಾಣ
6	ಕುಂದಗೋಳ	ಹುಬ್ಬಳ್ಳಿ–ಕುಂದಗೋಳ ರಸ್ತೆ ಕಿ ಮೀ 8 04 ರಲ್ಲಿ ಸೇತುವೆ ನಿರ್ಮಾಣ

		ಹುಬ್ಬಳ್ಳಿ–ಕುಂದಗೋಳ ರಸ್ತೆ ಕಿ ಮೀ 11 06 ರಲ್ಲಿ ಸೇತುವೆ ನಿರ್ಮಾಣ
7	ಕಲಘಟಗಿ	ಕಲಘಟಗಿ–ತಡಸ ರಸ್ತೆಯ ಕಿ ಮೀ 4 00 ರಲ್ಲಿ ಬೆಡ್ತಿಹಳ್ಳಕ್ಕೆ ಸೇತುವೆ ನಿರ್ಮಾಣ
8	ನವಲಗುಂದ	ನರಗುಂದ–ತಿರ್ಲಾಪುರ–ಬ್ಯಾಹಟ್ಟಿ ರಸ್ತೆಯ ಕಿ ಮೀ 23 37 ರಲ್ಲಿ ಹುಬ್ಬಳ್ಳಿ–ಕುಂದಗೋಳ ರಸ್ತೆ ಕಿ ಮೀ 8 04ರಲ್ಲಿ ಸೇತುವೆ ನಿರ್ಮಾಣ

ಇ) 2005–06ನೇ ಸಾಲಿನಲ್ಲಿ ನಬಾರ್ಡ್‌ನ ಆರ್‌ಐಡಿಎಫ್–11 ರ ಯೋಜನೆಯಡಿ ಒಟ್ಟಾರೆ 443 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತವೆ

ಈ) ಧಾರವಾಡ ಜಿಲ್ಲೆಯಲ್ಲಿ ಆರ್‌ಐಡಿಎಫ್–11ರ ಯೋಜನೆಯಡಿ 558 50 ಲಕ್ಷ ರೂ ಮೊತ್ತದ 10 ರಸ್ತೆ ಕಾಮಗಾರಿಗಳು ಅನುಮೋದನೆಯಾಗಿದ್ದು, ಇದರಲ್ಲಿ ನವಲಗುಂದ ತಾಲ್ಲೂಕಿನ ಒಂದು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ 9 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ